ಯಂತ್ರವನ್ನು ಕೊಳ್ಳಬಾರದೇಕೆ? ಅದಕ್ಕೆ ಬೆಲೆ ಎಷ್ಟಿರಬಹುದು? ಇತ್ಯಾದಿ ಆಲೋಚನೆಗಳು ಬಂದು ನಿದ್ರೆ ಹತ್ತುವುದು ತಡವಾಯಿತು. ಆದರೆ, ಮಾರನೆಯ ದಿನ, ನನ್ನ ಈ ತಾರ್ಕಿಕ ಯೋಚನಾಸೌಧವೇ ಕುಸಿದುಬಿತ್ತು – ಕಾರಣ, ಅಂದು ರಾತ್ರಿ ಜೋರಾಗಿ ಗಾಳಿ ಬೀಸಿ ನಮ್ಮೂರಿನಲ್ಲಿ ಕರೆಂಟು ಕೈಕೊಟ್ಟಿದ್ದರಿಂದ, ಅವರ ನಿದ್ರಾಯಂತ್ರ ಕೆಲಸ ಮಾಡುವುದನ್ನು ನಿಲ್ಲಿಸಿತ್ತು; ಅಮೆರಿಕಾದ ಅತಿಥಿಗಳು ಕೆಂಪಾದ ಕಣ್ಣುಗಳಿಂದ ನನ್ನನ್ನು ದಿಟ್ಟಿಸುತ್ತ ನನಗೆ ಈ ಕಥೆ ಹೇಳಿದಾಗ, ನಾನು ಈ ವೈಜ್ಞಾನಿಕ ಆಲೋಚನಾಸರಣಿಗೆ ಮಂಗಳ ಹಾಡಿದೆ.

★★★

ಇಂಥ ಹುಡುಕಾಟವು ಒಂದು ಹೊಸ ತಿರುವನ್ನು ತೆಗೆದುಕೊಂಡಿದ್ದು ಅಕಸ್ಮಾತ್ತಾದ ಇನ್ನೊಂದು ಘಟನೆಯ ಮುಖಾಂತರ. ಸಾಧಾರಣವಾಗಿ ನನ್ನ ನಿದ್ದೆಯ ಸಮಸ್ಯೆಯನ್ನು ನಾನು ಯಾರಿಗೂ ಹೇಳಿಕೊಳ್ಳುವುದಿಲ್ಲ; ಕಾರಣ, ಒಬ್ಬೊಬ್ಬರು ಅದಕ್ಕೆ ಒಂದೊಂದು ಔಷಧಿ ಹೇಳಿ, ಅಂಥ ಚಿಕಿತ್ಸೆಗಳ ಚಿಂತೆಯಲ್ಲಿ ಇನ್ನೂ ತುಸು ಹೊತ್ತು ನಿದ್ದೆ ಹತ್ತದಂತೆ ಮಾಡಿಬಿಡುತ್ತಾರೆ. ಆದರೆ ಅಂದು, ನನಗೆ ಪರಿಚಿತರಾದ ಒಬ್ಬರಿಗೆ ಈ ವಿಚಾರವನ್ನು ನಾನು ಹೇಳಿಕೊಳ್ಳಲೇಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಯಿತು. ಅವರು ನಮ್ಮ ಊರಿನಲ್ಲೇ ಅತ್ಯಂತ ವಿಚಿತ್ರ ವ್ಯಕ್ತಿಯಾಗಿದ್ದು, ಆಗ ಅವರನ್ನು ಜನರು – ಅವರ ಬೆನ್ನಿನ ಹಿಂದೆ – 'ವಿಚಾರವಾದಿ' ಎಂಬ ಅಡ್ಡಹೆಸರಿನಿಂದ ಕರೆಯುತ್ತಿದ್ದರು. ಅದಕ್ಕೊಂದು ಕಾರಣವೂ ಇತ್ತು. ಕೆಲವೇ ತಿಂಗಳ ಹಿಂದೆ, ನಮ್ಮ ಮಠದವರು ಯಾವುದೋ ಹೋಮಹವನ ಮಾಡಿಸಿದ್ದರು; ಮತ್ತು, ಅದರಿಂದ ಪುಣ್ಯಸಂಚಯ ಮಾತ್ರವಲ್ಲ, ಪರಿಸರದಲ್ಲಿರುವ ಆಮ್ಲಜನಕದ ಪ್ರಮಾಣವೂ ಸಹ ವೃದ್ಧಿಯಾಗುತ್ತದೆಯಂತೆ ಎಂದು ಜನರ ಬಾಯಲ್ಲಿ ಮಾತುಕತೆ ಆರಂಭವಾಗಿತ್ತು. ಉತ್ತರಭಾರತದಿಂದೆಲ್ಲೋ ಬಂದ ವಿಜ್ಞಾನಿಗಳೊಬ್ಬರು ಹೀಗೆ ಆಮ್ಲಜನಕದ ಪ್ರಮಾಣ ಹೆಚ್ಚಾಗಿರುವುದನ್ನು ತಮ್ಮ ಲ್ಯಾಪ್‌ಟಾಪಿನಲ್ಲಿ ದಾಖಲಿಸಿ ತೋರಿಸಿದರಂತೆ ಎಂದೂ ಕೆಲವರು ಹೇಳತೊಡಗಿದ್ದರು. ಆಗ, ಈ ನಮ್ಮ ವಿಚಾರವಾದಿಗಳು ಅದರ ವಿರುದ್ಧ ಸೆಡ್ಡುಹೊಡೆದು ಊರವರ ಬಾಯಿಗೆ ಗ್ರಾಸವಾಗಿದ್ದರು. 'ಅಲ್ಲಯ್ಯ, ಬೆಂಕಿಯನ್ನು ಹೊತ್ತಿಸಿದರೆ ಇರುವ ಆಮ್ಲಜನಕ ಸುಟ್ಟು ಇಂಗಾಲದ ಡಯಾಕ್ಸೈಡ್ ಆಗುತ್ತದೆಯೆಂದು ಹೈಸ್ಕೂಲಿನಲ್ಲೇ ನಾವೆಲ್ಲ ಓದಿದ್ದೇವೆ; ಹಾಗಿರುವಾಗ ಹೋಮ ಮಾಡಿ ಆಮ್ಲಜನಕ ಹೆಚ್ಚಿಸುವ ಮಾರ್ಗವನ್ನು ಯಾರಾದರೂ ಕಂಡು ಹಿಡಿದಿದ್ದರೆ, ಅವರೀಗ ನೊಬೆಲ್ ಪ್ರಶಸ್ತಿ ಪಡೆಯುತ್ತಿದ್ದರೆ ಹೊರತು ನಮ್ಮ ಸ್ವಾಮಿಗಳ ಕೈಯಲ್ಲಿ ಶಾಲು ಹೊಚ್ಚಿಸಿಕೊಳ್ಳಲು ಇಲ್ಲಿಗೆ ಯಾಕೆ ಬರುತ್ತಿದ್ದರು?' ಎಂದು ಇವರು ಕಂಡಕಂಡವರಿಗೆಲ್ಲ ಹೇಳತೊಡಗಿದರು; ಮಾತ್ರವಲ್ಲ, 'ನಾನೂ ಲ್ಯಾಪ್‌ಟಾಪುಗಳನ್ನು ನೋಡಿದ್ದೇನೆ; ಅದರೊಳಕ್ಕೆ ಗಾಳಿಯನ್ನು ವಿಶ್ಲೇಷಿಸಿ ಆಮ್ಲಜನಕದ ಪ್ರಮಾಣವನ್ನು ತೋರಿಸುವ ಯಾವ ಉಪಕರಣವೂ ಇರಲು ಸಾಧ್ಯವಿಲ್ಲವಲ್ಲ?' – ಎಂದು ವದಂತಿಯ ಬುಡಕ್ಕೇ ಕೊಡಲಿ ಬೀಸಲಾರಂಭಿಸಿದರು. ಆದರೆ, ನಮ್ಮೂರಿನ ಬಹುತೇಕರು ಈ ವದಂತಿಯ ಆಕರ್ಷಕ ಗುಣಕ್ಕೆ ಮಾರುಹೋಗಿ ಅದನ್ನು ಬಾಯಿಂದ ಬಾಯಿಗೆ ಹಬ್ಬಿಸುತ್ತಿದ್ದರೆ ಹೊರತು, ಯಾರೂ ಅದನ್ನು ನಂಬಲಿಕ್ಕೆ ಹೋಗಿರಲಿಲ್ಲವಾದ್ದರಿಂದ, ಇವರ ಮಾತು ಆ ಕಥಾನಕದ ಇನ್ನೊಂದು ವಿಸ್ತರಣೆಯಷ್ಟೇ ಆಯಿತೇ ಹೊರತು ಅದರಿಂದ ಯಾವ ಸಾಮಾಜಿಕ ಬದಲಾವಣೆಯೂ ಸಂಭವಿಸಿರಲಿಲ್ಲ. ಬದಲು, ಮಠವನ್ನು ಬೈದುಕೊಂಡು ಓಡಾಡುವ ಇವರಿಗೆ, ಜನರು ವಿಶ್ವಾಸ ಮತ್ತು ವಿನೋದಗಳ ವಿಶಿಷ್ಟ ಹದದಲ್ಲಿ, ವಿಚಾರವಾದಿಯೆಂಬ ಹೆಸರನ್ನಂತೂ ಇಟ್ಟಿದ್ದರು.

ಆ ವಿಚಾರವಾದಿಗಳು ನನ್ನ ನಿದ್ರಾಹೀನತೆಯ ಸಮಸ್ಯೆಯ ಕಥೆಯನ್ನೂ ಮತ್ತು ಅದಕ್ಕೆ ನಾನು